ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೪

# ಕರ್ನಾಟಕ ವಿಧಾನ ಪರಿಷತ್ತು

**ನೂರ ಐವತ್ತ ಮೂರನೇ ಅಧಿವೇಶನ**

**ಶುಕ್ರವಾರ, ದಿನಾಂಕ: ೧೯ನೇ ಜುಲೈ, ೨೦೨೪**

---

## ಸಮೂಹ – V

೧. ಸಮಾಜ ಕಲ್ಯಾಣ ಸಚಿವರು

೨. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು

೩. ಕೃಷಿ ಸಚಿವರು

೪. ಕಾರ್ಮಿಕ ಸಚಿವರು

೫. ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಕನ್ನಡ ಮತ್ತು ಸಂಸ್ಕೃತಿ ಸಚಿವರು

೬. ಯೋಜನೆ ಮತ್ತು ಸಾಂಖ್ಯಿಕ ಸಚಿವರು

೭. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು

---

## ಹಿಂದುಳಿದ ವರ್ಗಗಳ ಬಾಲಕ/ಬಾಲಕಿಯರ (ಪ್ರೀ ಮತ್ತು ಪೋಸ್ಟ್ ಮೆಟ್ರಿಕ್) ವಿದ್ಯಾರ್ಥಿ ನಿಲಯಗಳ ಸಮಸ್ಯೆಗಳ ಕುರಿತು

**ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) –**

೪೬ (೩೧೨) ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಬಾಲಕ/ಬಾಲಕಿಯರ (ಪ್ರೀ ಮತ್ತು ಪೋಸ್ಟ್ ಮೆಟ್ರಿಕ್) ಎಷ್ಟು ವಸತಿ ನಿಲಯಗಳಿವೆ ; (ಜಿಲ್ಲಾವಾರು ವಿವರ ನೀಡುವುದು)

(ಆ) ಹಿಂದುಳಿದ ವರ್ಗಗಳ ವಸತಿ ನಿಲಯಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿದ್ದು, ಅವುಗಳನ್ನು ನಿವಾರಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ;

(ಇ) ತೀರಾ ಬಡವರ ಮಕ್ಕಳು ಓದುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳಲ್ಲಿ ಗುಣಮಟ್ಟವಿಲ್ಲದ ದಿನಸಿ ಬಳಕೆ, ತಾಜಾ ಅಲ್ಲದ ತರಕಾರಿ, ಅರೆಬೆಂದ ಮತ್ತು ಕೀಟಗಳು ಇರುವ ಕಳಪೆ ಆಹಾರ ಕೊಡುತ್ತಿರುವುದಕ್ಕೆ ಸರ್ಕಾರ ಏನು ಕ್ರಮಗಳನ್ನು ಕೈಗೊಂಡಿದೆ ;

(ಈ) ಇತ್ತೀಚೆಗೆ ಕೆಲವು ಮುಖ್ಯ ನಗರಗಳಿಗೆ ಬಡ ಹಿಂದುಳಿದ ವಿದ್ಯಾರ್ಥಿಗಳು ಪಿಯುಸಿ/ಉನ್ನತ ಶಿಕ್ಷಣ ಪಡೆಯಲು ಬರುತ್ತಿರುವುದರಿಂದ ವಸತಿ ನಿಲಯಗಳ ಬೇಡಿಕೆ ಹೆಚ್ಚಾಗಿದ್ದು ಅದನ್ನು ಹೇಗೆ ಸರಿದೂಗಿಸಲಾಗಿದೆ?

## ಭಿಕ್ಷುಕರ ಸೆಸ್ ಹಣದ ಬಗ್ಗೆ

**ಶ್ರೀ ಗೋವಿಂದರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೪೭ (೩೨೩) ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸ್ಥಳೀಯ ಸಂಸ್ಥೆಗಳಿಂದ ಕಳೆದ ೧೦ ವರ್ಷಗಳಿಂದ ಇದುವರೆಗೂ ವಸೂಲಿ ಮಾಡಲಾದ ಭಿಕ್ಷುಕರ ಸೆಸ್ ಹಣವೆಷ್ಟು ; (ಜಿಲ್ಲಾವಾರು ವಿವರವಾದ ಮಾಹಿತಿ ನೀಡುವುದು)

(ಆ) ವಸೂಲಾದ ಸೆಸ್ ಹಣವನ್ನು ಸಮಾಜ ಕಲ್ಯಾಣ ಇಲಾಖೆಗೆ ವರ್ಗಾಯಿಸಲಾಗಿದೆಯೇ ;

(ಇ) ವರ್ಗಾಯಿಸದಿದ್ದಲ್ಲಿ ಆ ಮೊತ್ತವೆಷ್ಟು ; ಇಲ್ಲದಿದ್ದಲ್ಲಿ, ಕಾರಣಗಳೇನು ;

(ಈ) ವರ್ಗಾಯಿಸದಿದ್ದಲ್ಲಿ, ಆ ಹಣವನ್ನು ಯಾವ ಖಾತೆಯಲ್ಲಿ ಇಡಲಾಗಿದೆ ; ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು ;

(ಉ) ಸದರಿ ಹಣವನ್ನು ಯಾವ ಯಾವ ಕಾರ್ಯಕ್ರಮಗಳಿಗೆ ಬಳಸಿಕೊಳ್ಳಲಾಗಿದೆ ;

(ಊ) ಕಳೆದ ೫ ವರ್ಷಗಳಿಂದ ಉಳಿಕೆಯಾದ ಸೆಸ್ ಹಣ ಎಷ್ಟು ಮತ್ತು ಉಳಿಕೆ ಹಣವನ್ನು ಯಾವ ಬ್ಯಾಂಕಿನಲ್ಲಿ ಇಡಲಾಗಿದೆ ? (ಬ್ಯಾಂಕಿನ ಪೂರ್ಣ ವಿವರ ನೀಡುವುದು)

## ಬಾಲನ್ಯಾಯ ಕಾಯ್ದೆ ಜಾರಿ ಕುರಿತು

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೮ (೫೩೭) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಬಾಲನ್ಯಾಯ ಕಾಯ್ದೆ, ೨೦೧೫ ಜಾರಿಗೆ ಬಂದು ೯ ವರ್ಷಗಳಾದರೂ ಅದರ ಎಲ್ಲಾ ಅಂಶಗಳು ಇದುವರೆಗೂ ಜಾರಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕಾನೂನು ಸಂಘರ್ಷಕ್ಕೆ ಒಳಗಾಗಿರುವ ಮಕ್ಕಳು ಗಂಭೀರ ಮಾನಸಿಕ ಕಾಯಿಲೆಗಳಿಂದ ಬಳಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಮತ್ತು ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು ; (ವಿವರ ನೀಡುವುದು)

(ಇ) ಮಕ್ಕಳ ವಿಚಾರಣೆ ಪರಿವೀಕ್ಷಣಾಲಯಗಳಲ್ಲಿ ನಿಗಧಿತ ನಾಲ್ಕು ತಿಂಗಳ ಕಾಲಾವಧಿಯಲ್ಲಿ ನಡೆಯದಿರುವುದರಿಂದ ಅನಾವಶ್ಯವಾಗಿ ಮಕ್ಕಳು ಖಿನ್ನತೆ, ಆತಂಕ ಮತ್ತು ಆಕ್ರಮಣಕಾರಿ ಸಮಸ್ಯೆಗಳಿಂದ ಬಳಲುತ್ತಿರುವುದರ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ? (ವಿವರ ನೀಡುವುದು)

## ಕರಾವಳಿ ಅಭಿವೃದ್ಧಿ ಪ್ರಾಧಿಕಾರವನ್ನು ಕರಾವಳಿ ಅಭಿವೃದ್ಧಿ ಮಂಡಳಿಯನ್ನಾಗಿ ಪರಿವರ್ತಿಸುವ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) –**

೪೯ (೪೩೬) ಯೋಜನೆ ಮತ್ತು ಸಾಂಖ್ಯಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರಾವಳಿ ಅಭಿವೃದ್ಧಿ ಪ್ರಾಧಿಕಾರವನ್ನು "ಕರಾವಳಿ ಅಭಿವೃದ್ಧಿ ಮಂಡಳಿ"ಯನ್ನಾಗಿ ಪರಿವರ್ತಿಸಲು ಸರ್ಕಾರ ಕೈಗೊಂಡ ಕ್ರಮವೇನು; ಈ ಮಂಡಳಿ ಅಸ್ತಿತ್ವಕ್ಕೆ ಬರುವುದು ಯಾವಾಗ ; (ವಿವರ ನೀಡುವುದು)

(ಆ) ಕರಾವಳಿ ಅಭಿವೃದ್ಧಿ ಪ್ರಾಧಿಕಾರದಿಂದ ೨೦೨೧–೨೨, ೨೦೨೨–೨೩ ಮತ್ತು ೨೦೨೩–೨೪ನೇ ಸಾಲುಗಳಲ್ಲಿ ಕೈಗೊಂಡ ಕಾಮಗಾರಿಗಳು ಯಾವುವು ; ಈ ಪೈಕಿ ಯಾವ ಮಾನದಂಡದ ಆಧಾರದಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ; (ವಿವರ ನೀಡುವುದು)

(ಇ) ಪೂರ್ಣಗೊಂಡ ಕಾಮಗಾರಿಗಳಾವುವು ; (ವಿವರ ನೀಡುವುದು)

(ಈ) ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಮುಂದಿರುವ ಯೋಜನೆಗಳಾವುವು ; (ವಿವರ ನೀಡುವುದು)

(ಉ) ಕರಾವಳಿ ಅಭಿವೃದ್ಧಿ ಪ್ರಾಧಿಕಾರದಲ್ಲಿ ಎಷ್ಟು ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ? (ವಿವರ ನೀಡುವುದು)

## ರಾಜ್ಯದಲ್ಲಿರುವ ಅಂಗನವಾಡಿ ಕೇಂದ್ರಗಳ ಕುರಿತು

**ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೩೦ (೩೧೧) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ದಾವಣಗೆರೆ ಜಿಲ್ಲೆಯಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು ; ಸದರಿ ಅಂಗನವಾಡಿ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ಒದಗಿಸುವುದು)

(ಆ) ದಾವಣಗೆರೆ ಜಿಲ್ಲೆಯಲ್ಲಿರುವ ಅಂಗನವಾಡಿ ಕೇಂದ್ರಗಳಲ್ಲಿ ಸ್ವಂತ ಕಟ್ಟಡ ಹಾಗೂ ಸ್ವಂತ ಕಟ್ಟಡವಿಲ್ಲದ ಕೇಂದ್ರಗಳೆಷ್ಟು ; ಸ್ವಂತ ಕಟ್ಟಡವಿಲ್ಲದ ಕೇಂದ್ರಗಳನ್ನು ಯಾವ ಕಾಲಮಿತಿಯೊಳಗೆ ನಿರ್ಮಿಸಲಾಗುವುದು ; (ತಾಲ್ಲೂಕುವಾರು ಪ್ರತ್ಯೇಕ ಮಾಹಿತಿ ಒದಗಿಸುವುದು)

(ಇ) ದಾವಣಗೆರೆ ಜಿಲ್ಲೆಯಲ್ಲಿ ಕಳೆದ ಒಂದು ವರ್ಷದಲ್ಲಿ ಯಾವ ಯೋಜನೆಯಡಿ ಎಷ್ಟು ಅಂಗನವಾಡಿ ಕೇಂದ್ರಗಳನ್ನು ನಿರ್ಮಿಸಲಾಗಿದೆ ; ಹೊಸದಾಗಿ ಎಷ್ಟು ಅಂಗನವಾಡಿ ಕೇಂದ್ರಗಳನ್ನು ಯಾವಾಗ ನಿರ್ಮಿಸಲಾಗುವುದು ? (ಸಂಪೂರ್ಣ ಮಾಹಿತಿ ನೀಡುವುದು)

## ಕೃಷಿ ಹೊಂಡಗಳ ಕುರಿತು

**ಶ್ರೀ ಕೇಶವ ಪ್ರಸಾದ್. ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) –**

೫೧ (೪೪೭) ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಮೂರು ವರ್ಷಗಳಲ್ಲಿ ನಿರ್ಮಾಣಗೊಂಡಿರುವ ಕೃಷಿ ಹೊಂಡಗಳ ಸಂಖ್ಯೆ ಎಷ್ಟು ; (ವರ್ಷವಾರು, ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಕೃಷಿ ಹೊಂಡಗಳನ್ನು ನಿರ್ಮಿಸಲು ಕಳೆದ ಮೂರು ವರ್ಷಗಳಲ್ಲಿ ಸರ್ಕಾರವು ಮಾಡಿರುವ ವೆಚ್ಚ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಸರ್ಕಾರದ ಸಹಾಯಧನದಿಂದ ಕೃಷಿ ಹೊಂಡಗಳನ್ನು ನಿರ್ಮಿಸಿರುವ ಕೃಷಿಕರ ಹೆಸರು ಮತ್ತು ವಿಳಾಸ ಹಾಗೂ ಎಷ್ಟು ಕೃಷಿ ಹೊಂಡಗಳನ್ನು ನಿರ್ಮಿಸಿರುತ್ತಾರೆ ಎಂಬುದರ ಕುರಿತು ಜಿಲ್ಲಾವಾರು ಮಾಹಿತಿ ನೀಡುವುದು ;

(ಈ) ಒಂದು ಕೃಷಿ ಹೊಂಡ ನಿರ್ಮಿಸಲು ಆಗುವ ವೆಚ್ಚ ಎಷ್ಟು ; ಸರ್ಕಾರದ ಸಹಾಯ ಧನವೆಷ್ಟು ;

(ಉ) ಕೃಷಿ ಹೊಂಡ ನಿರ್ಮಿಸಲು ಯಾವ ಯಾವ ಸಂಸ್ಥೆಗಳಿಗೆ ದರ ಕರಾರಿನನ್ವಯ ಅವಕಾಶ ಕಲ್ಪಿಸಲಾಗಿದೆ ? (ಜಿಲ್ಲಾವಾರು ಮಾಹಿತಿ ನೀಡುವುದು)

## ನವರಸಪುರದಲ್ಲಿ ನೃತ್ಯೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳುವ ಬಗ್ಗೆ

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು) –**

೫೨ (೪೪೦) ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ನವರಸಪುರ ನೃತ್ಯೋತ್ಸವ ಕಾರ್ಯಕ್ರಮವು ಯಾವ ಸಾಲಿನಲ್ಲಿ ಪ್ರಾರಂಭವಾಯಿತು ಹಾಗೂ ಎಷ್ಟು ವರ್ಷಗಳಿಂದ ನಡೆಸಿಕೊಂಡು ಬರಲಾಗಿದೆ ಮತ್ತು ಎಷ್ಟು ವರ್ಷಗಳಿಂದ ನಿಲ್ಲಿಸಲಾಗಿದೆ ; (ವಿವರ ನೀಡುವುದು)

(ಆ) ಈ ಅಭೂತಪೂರ್ವ ನೃತ್ಯೋತ್ಸವ ಕಾರ್ಯಕ್ರಮವನ್ನು ನಿಲ್ಲಿಸಿರುವುದರಿಂದ ಸಂಗೀತಾಸಕ್ತರು ಹಾಗೂ ನೃತ್ಯ ಪ್ರೇಮಿಗಳಿಗೆ ತೀವ್ರ ನಿರಾಸೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಈ ಸಾಲಿನಿಂದಾದರೂ ಪುನಃ ನವರಸಪುರ ನೃತ್ಯೋತ್ಸವ ಕಾರ್ಯಕ್ರಮವನ್ನು ಪ್ರಾರಂಭಿಸಲಾಗುವುದೇ ?

## ರಾಜ್ಯದಲ್ಲಿರುವ ಅಂಗನವಾಡಿಗಳ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) –**

೫೩ (೪೯೭) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಅಂಗನವಾಡಿಗಳ ಸಂಖ್ಯೆ ಎಷ್ಟು ; ಸದರಿ ಅಂಗನವಾಡಿಗಳಿಗೆ ಮಂಜೂರು ಆಗಿರುವ ಹುದ್ದೆಗಳು ಯಾವುವು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿಗಳಲ್ಲಿ ಸ್ವಂತ ಕಟ್ಟಡವಿರುವ ಅಂಗನವಾಡಿಗಳ ಸಂಖ್ಯೆ ಎಷ್ಟು ; ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಕೊಪ್ಪಳ ನಗರದಲ್ಲಿ ಮಂಜೂರಾಗಿರುವ ಅಂಗನವಾಡಿಗಳ ಸಂಖ್ಯೆ ಎಷ್ಟು ; (ಅಂಗನವಾಡಿ ವಿಳಾಸ ಮತ್ತು ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ಸಮೇತ ವಿವರ ನೀಡುವುದು)

(ಈ) ಕೊಪ್ಪಳ ನಗರದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿಗಳ ಪೈಕಿ ಸ್ವಂತ ಕಟ್ಟಡವಿರುವ ಹಾಗೂ ಬಾಡಿಗೆ ಕಟ್ಟಡಗಳಲ್ಲಿ ನಡೆಸುತ್ತಿರುವ ಅಂಗನವಾಡಿಗಳೆಷ್ಟು ; (ವಾರ್ಡ್‌ವಾರು ವಿವರ ನೀಡುವುದು)

(ಉ) ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಲವು ಅಂಗನವಾಡಿಗಳು ಅಂಗನವಾಡಿ ಕಾರ್ಯಕರ್ತೆಯರ ಮನೆಯಲ್ಲಿಯೇ ನಡೆಯುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ; ಮನೆಯಲ್ಲಿಯೇ ಅಂಗನವಾಡಿಗಳು ಇದ್ದರೂ ಸರ್ಕಾರ ಬಾಡಿಗೆ ನೀಡುವುದು ಸರಿಯೇ ; ಇದರಿಂದ ಅಂಗನವಾಡಿಗಳಿಗೆ ಬರುವ ಮಕ್ಕಳಿಗೆ ತೊಂದರೆಯಾಗುವುದಿಲ್ಲವೆ ; ಈ ಬಗ್ಗೆ ಸರ್ಕಾರದ ನಿಲುವೇನು ;

(ಊ) ರಾಜ್ಯದಲ್ಲಿರುವ ಅಂಗನವಾಡಿಗಳಲ್ಲಿ ಯಾವ ರೀತಿಯ ಆಹಾರ ವ್ಯವಸ್ಥೆಯನ್ನು ಮಾಡಲಾಗಿದೆ ; ಊಟ ಮತ್ತು ತಿಂಡಿಗಳನ್ನು ತಯಾರಿಸಲು ಯಾವ ಯಾವ ವಸ್ತುಗಳನ್ನು ಸರ್ಕಾರ ಸರಬರಾಜು ಮಾಡುತ್ತಿದೆ ; (ವಸ್ತುವಾರು ವಿವರ ನೀಡುವುದು)

(ಋ) ಅಂಗನವಾಡಿಗಳಲ್ಲಿ ವಿತರಿಸಲು ಎಷ್ಟು ಪ್ರಮಾಣದಲ್ಲಿ ಯಾವ ಯಾವ ವಸ್ತುಗಳನ್ನು ಖರೀದಿಸಲಾಗಿದೆ ; (ವಸ್ತುವಾರು ವಿವರ ಒದಗಿಸುವುದು)

(ಎ) ಅಂಗನವಾಡಿಗಳಲ್ಲಿ ವಿತರಿಸಲು ಆಹಾರ ಮತ್ತು ಇತರ ವಸ್ತುಗಳನ್ನು ಸರ್ಕಾರವು ಖರೀದಿಸುವ ಪ್ರತಿ ಕೆ.ಜಿ. ಅಥವಾ ಪ್ರತಿ ವಸ್ತುವಿಗೆ ನಿಗದಿಪಡಿಸಲಾದ ದರವೆಷ್ಟು ; ಮತ್ತು ಸಾಗಾಣಿಕೆದಾರರ ಹೆಸರು ಮತ್ತು ಸಂಪೂರ್ಣ ವಿವರದೊಂದಿಗೆ ವಸ್ತುವಾರು ವಿವರ ನೀಡುವುದು ?

## ಜಲಜೀವನ್ ಮಿಷನ್ ಯೋಜನೆ ಬಗ್ಗೆ

**ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) –**

೫೪ (೫೪೧) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಜಲಜೀವನ್ ಮಿಷನ್ ಯೋಜನೆಯನ್ನು ಯಾವಾಗ ಜಾರಿಗೆ ತರಲಾಗಿದೆ ; (ಪೂರ್ಣ ವಿವರ ನೀಡುವುದು)

(ಆ) ಈ ಯೋಜನೆಗೆ ರಾಜ್ಯ ಮತ್ತು ಕೇಂದ್ರ ಸರ್ಕಾರ ನೀಡುತ್ತಿರುವ ಅನುದಾನ ಎಷ್ಟು ; (ವಿವರ ಒದಗಿಸುವುದು)

(ಇ) ಈ ಯೋಜನೆಯ ವ್ಯಾಪ್ತಿಯಲ್ಲಿ ಗ್ರಾಮೀಣ ಪ್ರದೇಶಗಳನ್ನು ಸೇರಿಸಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಒದಗಿಸಲಾಗುತ್ತಿದೆಯೇ ; (ಮಾಹಿತಿ ಒದಗಿಸುವುದು)

(ಈ) ಬೆಂಗಳೂರು ನಗರ ಯಶವಂತಪುರ ವಿಧಾನ ಸಭಾ ಕ್ಷೇತ್ರಕ್ಕೆ ಯಾವ ಯಾವ ಪಂಚಾಯತ್‌ಗಳು ಒಳಪಡುತ್ತವೆ ; ಈ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳಿಗೆ ಕುಡಿಯುವ ನೀರಿನ ಶಾಶ್ವತ ಯೋಜನೆಯನ್ನು ಒದಗಿಸಲಾಗಿದೆಯೇ ? (ಪೂರ್ಣ ವಿವರ ನೀಡುವುದು)

## ರಾಜ್ಯದ ಗೊಲ್ಲ ಸಮುದಾಯದ ನಿಗಮಕ್ಕೆ ಅಧ್ಯಕ್ಷರನ್ನು ನೇಮಿಸುವ ಬಗ್ಗೆ

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೫೫ (೪೭೬) ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯ ಸರ್ಕಾರದ ವತಿಯಿಂದ ಸ್ಥಾಪಿಸಲಾಗಿರುವ 'ಕಾಡುಗೊಲ್ಲ ಅಭಿವೃದ್ಧಿ ನಿಗಮ ನಿಯಮಿತ' ಸಂಸ್ಥೆಗೆ ಅಧ್ಯಕ್ಷರನ್ನು ನೇಮಿಸಲಾಗಿದೆಯೇ ;

(ಆ) ಇಲ್ಲವಾದಲ್ಲಿ, ಸದರಿ ಸಂಸ್ಥೆಗೆ ಕಾಡುಗೊಲ್ಲ ಸಮುದಾಯದ ಏಳಿಗೆಗಾಗಿ ಬದ್ಧರಾಗಿರುವ ವ್ಯಕ್ತಿಯನ್ನೇ ಅಧ್ಯಕ್ಷ ಸ್ಥಾನಕ್ಕೆ ನೇಮಿಸಲಾಗುವುದೇ; ಹಾಗೂ ಈ ಕಾರ್ಯ ಯಾವಾಗ ಪೂರ್ಣಗೊಳ್ಳುವುದು ; (ಮಾಹಿತಿ ನೀಡುವುದು)

(ಇ) ಕಾಡುಗೊಲ್ಲ ಅಭಿವೃದ್ಧಿ ನಿಗಮಕ್ಕೆ ಮೀಸಲಿಟ್ಟಿರುವ ಒಟ್ಟು ಹಣವೆಷ್ಟು ;

(ಈ) ಕಾಡುಗೊಲ್ಲ ಅಭಿವೃದ್ಧಿ ನಿಗಮದಿಂದ ಕಾಡುಗೊಲ್ಲರ ಅಭಿವೃದ್ಧಿಗಾಗಿ ಎಷ್ಟು ಹಣ ಖರ್ಚು ಮಾಡಲಾಗಿದೆ ಮತ್ತು ಎಷ್ಟು ಫಲಾನುಭವಿಗಳು ಈ ನಿಗಮದಿಂದ ಸಹಾಯ ಪಡೆದುಕೊಂಡಿದ್ದಾರೆ ? (ವಿವರ ನೀಡುವುದು)

## ಕುಡಿಯುವ ನೀರಿನ ಸಮಸ್ಯೆ ಬಗ್ಗೆ

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) –**

೫೬ (೪೩೪) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ವರ್ಷದ ಬರಗಾಲದಲ್ಲಿ ರಾಜ್ಯದ ಎಷ್ಟು ಪಂಚಾಯಿತಿಗಳು, ಎಷ್ಟು ಗ್ರಾಮಗಳು ತೀವ್ರವಾದ ಕುಡಿಯುವ ನೀರಿನ ಸಮಸ್ಯೆಗೆ ಒಳಗಾಗಿರುತ್ತವೆ ;

(ಆ) ಈ ಸಮಸ್ಯೆ ಬಗೆಹರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ? (ಪಂಚಾಯತಿವಾರು ವಿವರ ಒದಗಿಸುವುದು)

## SCSP-TSP ಯೋಜನೆಯಡಿ ಬರುವ ನಿಗಮ ಮಂಡಳಿಗಳಿಗೆ ಯಾವ ಯಾವ ಅನುದಾನ ನೀಡಿರುವ ಬಗ್ಗೆ

**ಶ್ರೀ ಹೆಚ್.ಪಿ. ಸುಧಾಮ್ ದಾಸ್ (ನಾಮನಿರ್ದೇಶನ ಹೊಂದಿದವರು) –**

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) –**

**ಶ್ರೀ ಛಲವಾದಿ ಟಿ. ನಾರಾಯಣ ಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) –**

೫೭ (೩೨೫+೪೮೦+೫೪೭) ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸರ್ಕಾರದ SCSP-TSP ಯೋಜನೆ ಮೂಲಕ ಇದುವರೆವಿಗೆ ಒಟ್ಟು ಎಷ್ಟು ನಿಗಮಗಳಿಗೆ ಪ್ರಸಕ್ತ ಸಾಲಿನಲ್ಲಿ ಹಣ ಒದಗಿಸಲಾಗಿದೆ ; (ಮಂಡಳಿ/ನಿಗಮವಾರು ವಿವರ ಒದಗಿಸುವುದು)

(ಆ) SCSP-TSP ಯೋಜನೆಯಡಿ ಹಣ ಪಡೆಯುತ್ತಿರುವ ಮಂಡಳಿ ಹಾಗೂ ನಿಗಮಗಳ ಪೈಕಿ ಪರಿಶಿಷ್ಟ ಸಮುದಾಯಕ್ಕೆ ಸಂಬಂಧಿಸಿದ ಹಾಗೂ ಸಮಾನ ವರ್ಗಕ್ಕೆ ಸಂಬಂಧಿಸಿದ ಮಂಡಳಿ/ನಿಗಮ/ಇಲಾಖೆಗಳ ವಿವರ ಒದಗಿಸುವುದು ;

(ಇ) ಒದಗಿಸಲಾಗಿರುವ ಹಣದಲ್ಲಿ ಇದುವರೆಗೆ ಪ್ರತಿ ನಿಗಮ/ಮಂಡಳಿಯಲ್ಲಿ ಯಾವ ಯಾವ ಯೋಜನೆಗಳಿಗೆ ಎಷ್ಟು ಹಣ ಖರ್ಚಾಗಿದೆ ; (ವಿವರ ಒದಗಿಸುವುದು)

(ಈ) SCSP-TSP ಯೋಜನೆಯಡಿ ಪ್ರಸ್ತುತ ಸಾಲಿನಲ್ಲಿ ನಿಗದಿಪಡಿಸಿರುವ ಒಟ್ಟು ಮೊತ್ತ ಎಷ್ಟು ; ಹಾಗೂ ಇದುವರೆಗೆ ಬಿಡುಗಡೆಯಾಗಿರುವ ಒಟ್ಟು ಮೊತ್ತ ಎಷ್ಟು ; (ವಿವರ ಒದಗಿಸುವುದು)

(ಉ) SCSP-TSP ಯೋಜನೆಯಡಿ ಪ್ರಸ್ತುತ ಸಾಲಿನಲ್ಲಿ ಒದಗಿಸಲಾಗಿರುವ ಹಣದಲ್ಲಿ ಎಷ್ಟು ಹಣವನ್ನು ಗ್ಯಾರಂಟಿ ಯೋಜನೆಗೆ ಬಳಸಲಾಗಿದೆ ; (ವಿವರ ಒದಗಿಸುವುದು)

(ಊ) ೨೦೨೩-೨೪ ಮತ್ತು ೨೦೨೪-೨೫ನೇ ಸಾಲಿನ ಜೂನ್-೨೦೨೪ ಅಂತ್ಯದವರೆಗೆ ಎಷ್ಟು ಮೊತ್ತವನ್ನು ಗ್ಯಾರಂಟಿ ಯೋಜನೆಗಳಲ್ಲಿ ಫಲಾನುಭವಿಗಳಾಗಿರುವ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳಿಗೆ ವೆಚ್ಚ ಮಾಡಲಾಗಿದೆ ; ಪ್ರತಿಯೊಂದು ಗ್ಯಾರಂಟಿ ಯೋಜನೆಯಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳ ಸಂಖ್ಯೆ ಎಷ್ಟು ; (ಪ್ರತಿಯೊಂದು ಗ್ಯಾರಂಟಿ ಯೋಜನೆಯ ಅನುಸಾರ ಮಾಹಿತಿ ನೀಡುವುದು)

(ಋ) ಪರಿಶಿಷ್ಟರ ಕಲ್ಯಾಣಕ್ಕಾಗಿ ಮೀಸಲಿಟ್ಟ ಹಣವನ್ನು ಗ್ಯಾರಂಟಿ ಯೋಜನೆಗೆ ವರ್ಗಾಯಿಸಿ ಅದನ್ನು ಬಳಕೆ ಮಾಡಿಕೊಂಡಿದ್ದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳ SCSP-TSP ಯೋಜನೆಯ ಹಣವನ್ನು ದುರ್ಬಳಕೆ ಮಾಡಿಕೊಂಡಂತಾಗುವುದಿಲ್ಲವೇ ; ಇದರಿಂದ SCSP-TSP ಕಾಯ್ದೆಯ ಉಲ್ಲಂಘನೆ ಮತ್ತು ದಲಿತರ ಕಲ್ಯಾಣಕ್ಕೆ ಹಿನ್ನಡೆಯಾಗುವುದಿಲ್ಲವೇ ?

## ಗ್ರಾಮೀಣ ರಸ್ತೆಗಳ ಕುರಿತು

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) –**

೫೮ (೪೮೪) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯಾದ್ಯಂತ ಇರುವ ಒಟ್ಟು ಗ್ರಾಮೀಣ (ಪಂಚಾಯಿತಿ) ರಸ್ತೆಗಳ ಸರಾಸರಿ ವಿಸ್ತೀರ್ಣ ಎಷ್ಟು ; ಗ್ರಾಮೀಣ (ಪಂಚಾಯಿತಿ) ರಸ್ತೆಗಳೆಂದು ಅಧಿಸೂಚಿತಗೊಳಿಸಲು ಇರುವ ಮಾನದಂಡಗಳೇನು ; (ವಿವರ ನೀಡುವುದು)

(ಆ) ಶಿವಮೊಗ್ಗ ಜಿಲ್ಲೆಯ ಯಾವ ಯಾವ ಕ್ಷೇತ್ರದ ಪಂಚಾಯಿತಿ ರಸ್ತೆಗಳನ್ನು PMGSY ಮತ್ತು CMGSY ಯೋಜನೆಯಡಿ ಸೇರ್ಪಡೆಗೊಳಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ ; (ವಿವರ ನೀಡುವುದು)

(ಇ) ಪಂಚಾಯಿತಿ ರಸ್ತೆಗಳನ್ನು ಈ ಯೋಜನೆಯಡಿ ಸೇರ್ಪಡೆಗೊಳಿಸಲು ಸರ್ಕಾರ ಅನುಸರಿಸುವ ಮಾನದಂಡಗಳೇನು ;

(ಈ) ಈ ಪಂಚಾಯಿತಿ ರಸ್ತೆಗಳನ್ನು ಈ ಯೋಜನೆಯಡಿ ಸೇರ್ಪಡೆಗೊಳಿಸಲು ಯಾವ ಕಾಲಮಿತಿಯಲ್ಲಿ ಅಭಿವೃದ್ಧಿಪಡಿಸಲಾಗುವುದು ? (ವಿವರ ನೀಡುವುದು)

## ರಾಜ್ಯದಲ್ಲಿ ಪಿ.ಡಿ.ಓ.ಗಳಿಗೆ ಸೇವಾಬಡ್ತಿ ಸಿಗದಿರುವ ಬಗ್ಗೆ

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೫೯ (೩೧೬) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿನ ಗ್ರಾಮ ಪಂಚಾಯತಿಗಳನ್ನು ಬಲಪಡಿಸಲು ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುದ್ದೆಗಳನ್ನು ಭರ್ತಿ ಮಾಡಲು ೨೦೧೦ರಲ್ಲಿ ಸಚಿವ ಸಂಪುಟದಲ್ಲಿ ನಿರ್ಣಯ ಕೈಗೊಳ್ಳಲಾಗಿತ್ತೆ ; (ಮಾಹಿತಿ ನೀಡುವುದು)

(ಆ) ಸರ್ಕಾರದ ಆದೇಶ ಸಂ.ಗ್ರಾ.ಅಪ ೫೬೯ ಗ್ರಾಪಂಅ ೨೦೦೬ ದಿನಾಂಕ:೩೧.೦೩.೨೦೦೮ ಹಾಗೂ ಸಚಿವ ಸಂಪುಟದ ಟಿಪ್ಪಣಿ ಸಂಖ್ಯೆ: ಗ್ರಾಅಪ ೧೧೫ ಗ್ರಾಪಂಕಾ ೨೦೦೮, ೪೫/೨೦೦೯ ದಿನಾಂಕ:೨೨.೦೧.೨೦೦೯ರ ಪ್ರಕಾರ ೨೦೦೮–೦೯ ಹಾಗೂ ೨೦೦೯–೧೦ ಸಾಲಿಗೆ ಬಡ್ತಿ ಕೋಟಾದ ಹುದ್ದೆಗಳಲ್ಲಿ ೨/೩ ಭಾಗಕ್ಕೆ ಸೀಮಿತವಾಗಿ

ಬಡ್ತಿ ನೀಡದೇ ೨೦೧೦-೧೧ನೇ ಸಾಲಿಗೆ ಮೀಸಲಿರಿಸಿದ ೧/೩ ಭಾಗವನ್ನು ಸಹ ಮುಂಗಡವಾಗಿ ಬಡ್ತಿ ನೀಡಿದ್ದಲ್ಲಿ, ಸದರಿ ಸರ್ಕಾರದ ನಿರ್ಣಯಗಳ ವಿರುದ್ಧವಾಗಿ ಬಡ್ತಿ ಕೋಟಾದಡಿ ಎಷ್ಟು ಬಡ್ತಿಗಳನ್ನು ನೀಡಲಾಗಿದೆ ; (ಜಿಲ್ಲಾವಾರು ಬಡ್ತಿ ಹೊಂದಿದವರ ಪಟ್ಟಿ ನೀಡುವುದು)

(ಇ) ಸರ್ಕಾರದ ಆದೇಶ ಸಂ.ಗ್ರಾಅಪ ೧೧೫ ಗ್ರಾಪಂಕಾ ೨೦೦೮ ದಿನಾಂಕ:೧೧.೦೩.೨೦೧೦ರ ಪೂರ್ವದಲ್ಲಿಯೇ ಎಷ್ಟು ಜನರಿಗೆ ಗ್ರೇಡ್-೧ ಕಾರ್ಯದರ್ಶಿ ಹುದ್ದೆಯಿಂದ ಪಿ.ಡಿ.ಓ. ಹುದ್ದೆಗೆ ಬಡ್ತಿ ನೀಡಲಾಗಿದೆ ; (ಜಿಲ್ಲಾವಾರು ಬಡ್ತಿ ಹೊಂದಿದವರ ಪಟ್ಟಿ ನೀಡುವುದು)

(ಈ) ಈ ರೀತಿ ಬಡ್ತಿ ನೀಡಿರುವುದು ಸರಿಯಾದ ಕ್ರಮವೇ ; ಈ ರೀತಿ ಈ ಬಡ್ತಿ ಹೊಂದಿದವರಲ್ಲಿ ಎಷ್ಟು ಜನ ಹೆಚ್.ಆರ್.ಎಂ.ಎಸ್. ಮುಖಾಂತರ Split/ partial Salary (ಭಾಗಶಃ ಗ್ರೇಡ್-೧ ಕಾರ್ಯದರ್ಶಿ ಹಾಗೂ ಪಿ.ಡಿ.ಓ ವೇತನ) ಪಡೆದಿದ್ದಾರೆ ? (ಮಾಹಿತಿ ಒದಗಿಸುವುದು)

## ಕುಡಿಯುವ ನೀರಿನ ಕಾಮಗಾರಿಗಳ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೬೦ (೫೧೪) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಕುಡಿಯುವ ನೀರಿನ ಪೂರೈಕೆಯನ್ನು ಯಾವಯಾವ ಯೋಜನೆಯ ಮೂಲಕ ಮಾಡಲಾಗುತ್ತಿದೆ; ನೀರು ಪೂರೈಕೆಯಲ್ಲಿ ವಿವಿಧ ಯೋಜನೆಗಳ ಪಾಲೆಷ್ಟು; ಜಲಜೀವನ್ (ಜೆಜೆಎಂ), ಏಕಗ್ರಾಮ, ಬಹುಗ್ರಾಮ ಯೋಜನೆಗಳ ಪ್ರಗತಿಯ ವಿವರ ನೀಡುವುದು ;

(ಆ) ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರು ಪೂರೈಕೆ ಮಾಡಬೇಕಾದ ಒಟ್ಟು ಕುಟುಂಬಗಳ ಸಂಖ್ಯೆ ಎಷ್ಟು ; ಜೆಜೆಎಂಯಡಿ ನೀಡಲಾದ ನೀರು ಸಂಪರ್ಕಗಳೆಷ್ಟು ; ನೀರಿನ ಅಗತ್ಯವಿರುವ ಒಳ ಪ್ರದೇಶಗಳಿಗೆ ಜೆಜೆಎಂ ನೀರು ಸಂಪರ್ಕ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ವಿವರ ನೀಡುವುದು)

(ಇ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಜೆಜೆಎಂ ಯೋಜನೆಯಡಿ ಕೈಗೊಂಡ ಕಾಮಗಾರಿಗಳೆಷ್ಟು ; ಗುರುತಿಸಿದ ಸುಸ್ಥಿರತೆಯ ಜಲಮೂಲಗಳೆಷ್ಟು ; ಭೌತಿಕ ಆಸ್ತಿಗಳಾದ ಟ್ಯಾಂಕ್, ಪೈಪ್ ಲೈನ್ ಇತ್ಯಾದಿ ಸೃಜಿಸಿ ಸುಸ್ಥಿರ ಜಲಮೂಲಗಳನ್ನು ಗುರುತಿಸದಿರುವುದನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ; (ವಿವರ ನೀಡುವುದು)

(ಈ) ಜೆಜೆಎಂ ಕಾಮಗಾರಿ ಆದೇಶಗಳಲ್ಲಿ ಗುಣಮಟ್ಟ ಹಾಗೂ ನಿರ್ವಹಣೆ ಕುರಿತಂತೆ ಇರುವ ಕರಾರುಗಳೇನು ; ಈ ಕರಾರುಗಳನ್ನು ಸದರಿ ಕುಡಿಯುವ ನೀರಿನ ಒಟ್ಟು ವ್ಯವಸ್ಥೆಯನ್ನು ಸಮರ್ಪಕವಾಗಿ ಮುಂದುವರಿಸಲು ಪೂರಕವಾಗುವಂತೆ ಬದಲಾಯಿಸಲಾಗಿದೆಯೇ ; ಈ ಕುರಿತಂತೆ ಗ್ರಾಮ ಪಂಚಾಯತಿಗಳ ಆಕ್ಷೇಪಣೆಗಳನ್ನು ಪರಿಗಣಿಸಲಾಗಿದೆಯೇ ; (ವಿವರ ನೀಡುವುದು)

(ಉ) ಜೆಜೆಎಂ ಯೋಜನೆಯ ನೀರು ಸ್ಥಾವರ, ಟ್ಯಾಂಕುಗಳು, ಪೈಪ್ ಲೈನ್ ಇತ್ಯಾದಿ ತಾಂತ್ರಿಕ ವ್ಯವಸ್ಥೆಯನ್ನೊಳಗೊಂಡ ಆಸ್ತಿಗಳ ಗುಣಮಟ್ಟವನ್ನು ಖಾತ್ರಿಪಡಿಸಿ ಹಸ್ತಾಂತರಿಸಲು ಮತ್ತು ಪಡೆಯಲು ಸಕ್ಷಮ ಪ್ರಾಧಿಕಾರಗಳು ಯಾವುವು ; ಗ್ರಾಮ ಪಂಚಾಯತಿಗಳು ಕುಡಿಯುವ ನೀರಿನ ವ್ಯವಸ್ಥೆಯನ್ನು ನಿರ್ವಹಿಸಲು ತಾಂತ್ರಿಕ ಪರಿಣತಿ ಮತ್ತು ಸಂಪನ್ಮೂಲವನ್ನು ಹೊಂದಿದೆಯೇ ; (ವಿವರ ನೀಡುವುದು)

(ಊ) ಜೆಜೆಎಂ ಯೋಜನೆಯಡಿ ಕಾಮಗಾರಿಗಳನ್ನು ನಿರ್ವಹಿಸುವಾಗ ವಿವಿಧ ರಸ್ತೆಗಳನ್ನು, ರಸ್ತೆ ಬದಿ, ಚರಂಡಿಗಳನ್ನು ಹಾಳುಗೆಡವಿದ್ದು ವಾಹನಗಳ ಸಂಚಾರಕ್ಕೆ ತೊಂದರೆಯಾಗಿ ಅಪಾಯಕಾರಿ ಅಪಘಾತಗಳಿಗೆ ಕಾರಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾ.ಸೂ.243/ಪಿ5

**List of Questions for Oral Answers**

**Total No. of Questions - 15**

# LIST - 04

# KARNATAKA LEGISLATIVE COUNCIL

## ONE HUNDRED AND FIFTY THIRD SESSION

## Friday, the 19th July, 2024

---

### GROUP - V

1. Minister for Social Welfare
2. Minister for Rural Development and Panchayat Raj and Information Technology and Bio-Technology
3. Minister for Agriculture
4. Minister for Labour
5. Minister for Backward Classes Welfare and Kannada and Culture
6. Minister for Planning and Statistics
7. Minister for Women and Child Development and Empowerment of Differently Abled and Senior Citizens

---

### PROBLEMS IN BOYS/GIRLS (PRE AND POST METRIC) HOSTELS OF BACKWARD CLASSES

**Dr. Talwar Sabanna (Nominated)-**

46 (312) Will the Minister for Backward Classes Welfare and Kannada and Culture be pleased to state:-

a) the number of boys/girls (pre and post metric) hostels of backward classes in the State; (districtwise details be furnished)

b) as there is a lack of basic facilities in the hostels of backward classes, the steps taken by the Government to resolve the same;

c) the steps taken by the Government for consumption of substandard groceries, unfresh vegetables, poor quality food which is partially cooked and containing insects is providing in backward classes hostels where very poor children are studying;

d) in recent days students of poor and backward classes are arriving to some major cities for pursuing P.U.C/ higher education, eventually the demand of hostels has been increased, the manner in which same has been set right?

## AMOUNT OF BEGGERS' CESS

**Sri Govinda Raju (Elected by Legislative Assembly)-**

47 (323) Will the Minister for Social Welfare be pleased to state:-

a) the amount of beggars' cess that has been recovered by the local bodies from the last 10 years to till date; (districtwise detailed information be furnished)

b) whether the recovered cess amount has been transferred to social welfare department;

c) if so, the amount there of; if not ,the reasons there for;

d) if not, the particulars of the accounts in which the amount has been deposited; the actions taken by the concerned officers in this regard;

e) the particulars of programmes for which the said amount has been utilised;

f) the remaining cess amount from the last five years and the particulars of the bank in which the remaining amount has been deposited? (complete details of bank be furnished)

## ENFORCEMENT OF JUVENILE JUSTICE ACT

**Sri Arun D.S (Local Authorities Constituency)-**

48 (537) Will the Minister for Women and Child Development and Empowerment of Differently Abled and Senior Citizens be pleased to state:-

a) 9 years have been elapsed after the Juvenile Justice Act-2015 came into force in the State; whether it has come to the notice of the Government that all facts of the same have not been implemented so far;

b) whether it has come to the notice of the Government that the children in conflict with law are suffering from serious mental illnesses; and the steps taken in this regard; (details be furnished)

c) as the trail is not being held during the prescribed four months, in children's courts which are situated in observation home, unnecessarily the children are suffering from the problems of depression, anxiety and aggressiveness hence the steps taken by the Government in this regard? (details be furnished)

## CONVERTION OF COASTAL DEVELOPMENT AUTHORITY AS COASTAL DEVELOPMENT BOARD

**Sri Ivan D'Souza (Elected by Legislative Assembly)-**

49 (436) Will the Minister for Planning and Statistics be pleased to state:-

a) the step taken by the Government to convert the Coastal Development Authority as "Coastal Development Board"; the date on which this board will come into force; (details be furnished)

b) the particulars of works that have been taken up by the Coastal Development Authority during the years 2021-22, 2022-23 and 2023-24; out of which, the criteria based on which works have been taken up; (details be furnished)

c) the particulars of works which have been completed; (details be furnished)

d) the particulars of projects which are before the Coastal Development Authority; (details be furnished)

e) the number of employees who are working in the Coastal Development Authority? (details be furnished)

**ANGANWADI CENTRES IN THE STATE**

**Sri K. Abdul Jabbar (Elected by Legislative Assembly)-**

50 (511) Will the Minister for Women and Child Development and Empowerment of Differently Abled and Senior Citizens be pleased to state:-

a) the number of Anganwadi centres in Davanagere district; the number of employees who are working in the said Anganwadi centres; (talukwise information be furnished)

b) out of the Anganwadi centres in Davanagere district, the number of Anganwadi centres which have own building and have not own building; the timelimit within which Anganwadi centers would be constructed which have not own building; (talukwise seperate information be furnished)

c) the number of Anganwadi centers that have been constructed under various schemes during the last one year in Davanagere district; the date on which the number of new Anganwadi centers that would be constructed? (complete information be furnished)

**REGARDING FARM POND**

**Sri Keshava Prasad. S (Elected by Legislative Assembly)-**

51 (447) Will the Minister for Agriculture be pleased to state:-

a) the number of farm ponds that have been contructed during the last three years; (yearwise, districtwise information be furnished)

b) the amount that has been spent by the Government to construct farm ponds during the last three years;(districtwise information be furnished)

c) districtwise information with regard to the name and address of the farmers who have constructed farm ponds by the Government subsidy and the number of farm ponds that have been constructed be furnished;

d) the expenditure to be incurred to construct one farm pond; the subsidy of the Government for the same;

e) the particulars of agencies for which the provision has been provided to construct farm pond as per contract rate? (districtwise information be furnished)

## NRUTHYOTHSAVA OF NAVARASAPURA FESTIVAL

**Sri Prakash K. Rathod (Nominated)-**

52 (440) Will the Minister for Backward Classes Welfare and Kannada and Culture be pleased to state:-

a) the year from which the Navarasapura dance programme has been commenced and the number of years from which the same has been conducted and the number of years from which it has been stopped; (details be furnished)

b) whether it has come to the notice of the Government that there is a lot of disappointment for music and dance lovers as unprecedented dance programme has been stoped;

c) whether Navarasapura dance programme would be commenced again from this year?

## ANGANWADIES IN THE STATE

**Smt. Hemalatha Nayak (Elected by Legislative Assembly)-**

53 (497) Will the Minister for Women and Child Development and Empowerment of Differently Abled and Senior Citizens be pleased to state:-

a) the number of anganwadies in the State; the details of the posts that have been sanctioned for the same; (talukwise details be furnished)

b) out of anganwadies that are functioning in the State, the number of anganwadies that are functioning in the own building; the number of anganwadies that are functioning in the rented building; (talukwise details be furnished)

c) the number of anganwadies that have been sanctioned in Koppal city; (details of the address of anganwadies along with the staff who are working be furnished)

d) out of the anganwadies are functioning in Koppal city the number of anganwadies that have own building and running in the rented building; (wardwise details be furnished)

e) whether it has come to the notice of the Government that some of the anganwadies functioning in the rented building are running in the house of anganwady workers; though the anganwadies are located in the house, whether it is fair to pay the rent by the Government; whether it is caused inconvenience for children who are coming to anganwadies; the stand of the Government in this regard;

f) the kind of food arrangement that has been made in anganwadies in the State; the details of the items that are being provided to prepare meals and snacks by the Government; (itemwise details be furnished)

g) the quantum of various items have been purchased to distribute in anganwadies; (itemwise details be furnished)

h) the price that has been fixed per kg or per item of food and other things to be purchased by the Government to distribute in anganwadies; and itemwise details alongwith name of the distributors and complete details be furnished?

## JAL JEEVAN MISSION PROJECT

**Sri T.N. Javarayi Gowda (Elected by Legislative Assembly)-**

54 (541) Will the Minister for Rural Development and Panchayat Raj and Information Technology and Bio-Technology be pleased to state:-

a) the date on which the Jal Jeevan Mission project has been implemented in the State; (complete details be furnished)

b) the grant that is being provided by the State and Central Government for this project; (details be furnished)

c) whether the drinking water facility is being provided by inserting rural areas in the jurisdiction of this project; (information be furnished)

d) the particulars of Panchayats which have covered under Yeshwantpur assembly constituency of Bengaluru urban; whether the permanent drinking water project has been provided to the villages which are coming in the limits of these Panchayats? (complete details be furnished)

## APPOINTMENT OF CHAIRMAN TO GOLLA COMMUNITY CORPORATION OF THE STATE

**Sri. Nagaraju M. (Elected by Legislative Assembly)-**

55 (476) Will the Minister for Backward Classes Welfare and Kannada and Culture be pleased to state:-

a) whether the Chairman has been appointed to 'Kadugolla development Corporation Limited' that has been established by the State Government;

b) if not, whether a person who is committed to the welfare of the kadugolla community would be appointed to the post of chairman for the said corporation;and the date on which this work would be completed; (information be furnished)

c) the total amount that has been earmarked to kadugolla development corporation;

d) the amount that has been spent for the development of kadugollas by the kadugolla development corporation and the number of beneficiaries who have been benefited by this corporation? (details be furnished)

## PROBLEM OF DRINKING WATER

**Smt. Bharathi Shetty (Nominated)-**

56 (434) Will the Minister for Rural Development and Panchayat Raj and Information Technology and Bio-Technology be pleased to state:-

a) the number of panchayats and villages of the State that were affected to severve drinking water problem during drought in the last year;

b) the steps taken by the Government to resolve this problem? (panchayatwise details be furnished)

## GRANT UNDER SCSP-TSP SCHEME

**Sri H.P.Sudham Das (Nominated)-**

**Sri Shantharama Budna Siddi (Nominated)-**

**Sri Chalavadi T. Narayanaswamy (Elected by Legislative Assembly)-**

57 (325 + 480 + 547) Will the Minister for Social Welfare be pleased to state:-

a) the number of corporations for which the grant that has been provided till date during the current year through the SCSP-TSP scheme of the Government; (board/ corporations details be furnished)

b) out of the board and corporations which are receiving amount under SCSP-TSP scheme the details of board/ corporation/departments with regard to scheduled caste community and equivalent category be furnished;

c) out of the provided fund, the amount that has been spent for various schemes till date in each corporation/board; (details be furnished)

d) the total amount that has been earmarked during the current year under SCSP-TSP scheme; and the total amount that has been released till date;

e) out of the amount that has been provided during the current year under SCSP-TSP scheme, the amount that has been utilised for guarantee schemes; (details be furnished)

f) the amount that has been spent for beneficiaries of scheduled caste and scheduled tribe who are the beneficiaries in the guarantee scheme from 2023-24 till the end of June -2024 of 2024-25; the number of beneficiaries of scheduled caste and scheduled tribes in each guarantee scheme; (information as per each guarantee scheme be furnished)

g) if the amount that has been earmarked for the welfare of scheduled caste and scheduled tribes, has been utilized by transferring for guarantee scheme, whether it is caused misuse of the amount of SCSP-TSP scheme of beneficiaries of scheduled caste and scheduled tribes; whether it is caused violation of SCSP-TSP Act and the setback has been caused for the welfare of SCSP-TSP from the same?

## REGARDING RURAL ROADS

**Smt. Balkhees Banu (Elected by Legislative Assembly) -**

58 (484) Will the Minister for Rural Development and Panchayat Raj and Information Technology and Bio-Technology be pleased to state:-

a) the average extent of total rural (panchayat) roads across the State; the prevailing criterias that are followed to notify as rural (panchayat)roads; (details be furnished)

b) whether the proposal has been submitted to the Government for inclusion under PMGSY and CMGSY scheme of the panchayat roads of various constituency in Shivamogga district; (details be furnished)

c) the criterias that are being followed by the Government for inclusion of panchayat roads under this scheme;

d) the timelimit within which this panchayat roads would be developed through inclusion under this scheme? (details be furnished)

## REGARDING PROMOTION FOR PDO's

**Sri P.H.Pujar (Local Authorities Constituency)**

59 (316) Will the Minister for Rural Development and Panchayat Raj and Information Technology and Bio-Technology be pleased to state:-

a) whether the decision has been taken in the cabinet meeting of 2010 to fill up the posts of Panchayat Development Officer to strengthen the gram panchayats in the State; (information be furnished)

b) if the promotion has been given in advance to the 1/3rd part of the posts that have been reserved for the year 2010-11 without giving promotion by restricting to 2/3 part in the posts of promotion quota for the year 2008-2009 and 2009-10 as per the Government Order No.569 GPO 2006 dated:31.03.2008 and cabinet note No. RDPR 115 GPS 2008 45/2009 dated:22.01.2009, the number of promotion that has been given under promotion quota against the decision of the State Government; (districtwise list of PDO's who have promoted be furnished)

c) the number of persons to whom the promotion has been given from the post of Secretary grade-1 to the post of PDO prior to the Government Order No. RDPR 115 GPS 2008 dated:11.03.2010; (districtwise list of PDO's who have promoted be furnished)

d) whether it is correct way that the promotion has been given in such manner; out of the persons who have promoted in such manner, the number of persons who have got the split/partial salary (pay of partial Secretary grade 1 and PDO) through HRMS? (information be furnished

**WORKS OF DRINKING WATER**

**Sri Manjunatha Bhandari (Local Authorities Constituency) -**

60 (514) Will the Minister for Rural Development and Panchayat Raj and Information Technology and Bio-Technology be pleased to state:-

a) the particulars of projects through which the supply of drinking water is being carried out in the State; the share of various projects in the supply of water; the details of progress of Jal Jeevan Mission(JJM) of single village, and multivillage project be furnished;

b) the total number of families to whom drinking water is to be supplied in rural area of the State; the number of water connections that have been provided under JJM; whether it has come to the notice of the Government that the water connection has not been provided for the inner areas which require water under JJM; (details be furnished)

c) the number of works that have been taken up under JJM in Dakshina Kannada and Udupi district; the number of identified sustainable water bodies; the measures taken by the Government to set right the non-identification of sustainable water bodies by creating physical assets like tanks, pipeline, etc's; (details be furnished)

d) the prevailing conditions with regard to the quality and maintenance in the order of JJM works; whether the said conditions have been changed appropriately to supplement to the continue compensative arrangement

of drinking water; whether the objections of gram panchayats have been considered in this regard; (details be furnished)

e) the particulars of competent authorities to hand over and taking over by ensuring the standards of assets including technical systems like water plants, tanks and pipeline, etc's under JJM project; whether the gram panchayats have the technical expertise and resource to maintain the system of drinking water; (details be furnished)

f) whether it has come to the notice of the Government that various roads, roadside drainages were damaged and vehicular movement was obstructed and it has caused terrible accidents; the measures taken by the Government in this regard? (details be furnished)

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, Bengaluru, WD-243 - P6 Copies